ಈ) ಸಸ್ಯ ಸಂರಕ್ಷಣಾ ಔಷಧಿಗಳನ್ನು ನೊವಾರ್ಟಿಸ್ ಎಕ್ಸ್‌ಲ್ ಇಂಡಸ್ಟ್ರೀಸ್ ಸುದರ್ಶನ್ ಕೆಮಿಕಲ್ಸ್, ಯುನೈಟೆಡ್ ಫಾಸ್ಪರಸ್ ಇ.ಐ.ಡಿ. ಪ್ಯಾರಿ, ಮಾರ್ಕಫೆಡ್, ಬೇಯರ್ ಇಂಡಿಯ ಲಿಮಿಟೆಡ್, ಟಿ ಸ್ಟೇನ್ಸ್ ಕಂಪನಿ ಮಾರ್ಗೊಬಯೋ ಕಂಟ್ರೋಲ್ ಕಂಪನಿಗಳಿಂದ ಕರ್ನಾಟಕ ತೋಟಗಾರಿಕೆ ಮಹಾಮಂಡಲ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾ ಮಂಡಲಗಳ ಮೂಲಕ ಪಡೆದುಕೊಳ್ಳಲಾಗಿದೆ.

ಉ) ಅನ್ವಯಿಸುವುದಿಲ್ಲ.

ಮಹಾದಾಯಿ ಯೋಜನೆಯ ಕಾರ್ಯ ಪ್ರಗತಿ

728(851) ಶ್ರೀ ಕುಪ್ಪಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾದಾಯಿ ನದಿಯಿಂದ ಮಲಪ್ರಭಾ ನದಿಗೆ ತಿರುವು ಯೋಜನೆಯ ಮೂಲಕ ನೀರು ಹರಿಸಿಕೊಳ್ಳುವ ಮಹಾದಾಯಿ ಯೋಜನೆಗೆ ಕೇಂದ್ರ ಸರ್ಕಾರ ಸಮ್ಮತಿ ನೀಡಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯಿಂದ ಎಷ್ಟು ಟಿಎಂಸಿ ನೀರು ದೊರಕಲಿದೆ?

ಇ) ಈ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ಕಾರ್ಯಗತ ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಮಹಾದಾಯಿ ನದಿ ಕೊಳ್ಳದಿಂದ 7.56 ಟಿಎಂಸಿ ಪ್ರಮಾಣದ ನೀರನ್ನು ಮಲಪ್ರಭಾ ನದಿಗೆ ತಿರುಗಿಸಲು ಕೇಂದ್ರ ಸರ್ಕಾರವು ಏಪ್ರಿಲ್ 2002ರಲ್ಲಿ ಒಪ್ಪಿಗೆ ನೀಡಿದೆ.

ಆ) 7.56 ಟಿ.ಎಂ.ಸಿ. ಪ್ರಮಾಣದ ನೀರು ದೊರಕಲಿದೆ.

ಇ) ಕಳಸಾ ಮತ್ತು ಬಂಡೂರ ನಾಲಾ ತಿರುವ ಯೋಜನೆಗಳ ಸರ್ವೆ, ತನಿಖೆ ವಿನ್ಯಾಸ, ಅಂದಾಜು ಪತ್ರಿಕೆ ಮತ್ತು ಕರಡು ದರಖಾಸ್ತುಗಳನ್ನು ತಯಾರಿಸುವ ಕಾರ್ಯವನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರಿಗೆ ವಹಿಸಲಾಗಿದೆ. ಯೋಜನೆಯ ಕೆಲಸವನ್ನು ಶೀಘ್ರವೇ ಪ್ರಾರಂಭಿಸಲಾಗುವುದು.

ಮಾರ್ಕಂಡೇಯ ಯೋಜನೆ

730(893) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾರ್ಕಂಡೇಯ ಯೋಜನೆಗೆ ಎಷ್ಟು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ; ಇದರಿಂದ ಎಷ್ಟು ಎಕರೆ ಜಮೀನು ನೀರಾವರಿಯಾಗುವುದು? ಇಲ್ಲಿಯವರೆಗೂ ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ.

ಆ) ಈ ನೀರಾವರಿ ಯೋಜನೆಯಿಂದ ಬೆಳಗಾವಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ನೀರಾವರಿಯಾಗುವುದು; (ಯಾವ ಯಾವ ಗ್ರಾಮಗಳಿಗೆ ನೀರಾವರಿಯಾಗುವುದು; ವಿವರ ನೀಡುವುದು)?